# ಸ್ವಾಮಿ ಶಾಶ್ವತಾನಂದ

## (೧೮೯೪-೧೯೬೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

**ರಾ**ಮಕೃಷ್ಣ ಮಠ, ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಶಾಶ್ವತಾನಂದಜಿ (ಸುರೇಶ ಮಹಾರಜರು) ಬೇಲೂರು ಮಠದ ಲೆಗೇಟ್ ಹೌಸ್‌ನ ದಕ್ಷಿಣ ದಿಕ್ಕಿನಲ್ಲಿರುವ ಕೋಣೆಯಲ್ಲಿದ್ದರು. ಆ ಕಟ್ಟಡದ ನಡುವಿನ ಕೋಣೆಯಲ್ಲಿದ್ದ ನಾಲ್ಕು ಮಂದಿ ಬ್ರಹ್ಮಚಾರಿಗಳಲ್ಲಿ ಮನ್ಮಥ ಮಹಾರಾಜರೂ (ಸತ್ಯವ್ರತಾನಂದಜಿ) ಒಬ್ಬರು. ಅವರು ಅದ್ವೈತಾಶ್ರಮಕ್ಕೆ ಸೇರಿದ ಬ್ರಹ್ಮಚಾರಿಗಳಾಗಿದ್ದರು. ನಾನು ಅವರೊಂದಿಗೆ ಮಾತನಾಡುತ್ತಿದ್ದಾಗ ಸುರೇಶ ಮಹಾರಾಜರು, ''ಏನು ವಿಶೇಷ, ಇವತ್ತು ಇಲ್ಲಿಗೆ ಬಂದು ಬಿಟ್ಟಿರುವೆಯಲ್ಲಾ!'' ಎಂದರು. ''ಮಹಾರಾಜ್, ಇವತ್ತು ನಮಗೆ ರಜೆ. ಆದ್ದರಿಂದ ಬೇಲೂರು ಮಠಕ್ಕೆ ಬಂದಿದ್ದೇನೆ.'' ''ರಜೆ! ರಜೆ! ಸಾಧು ಜೀವನದಲ್ಲಿ ರಜೆ! 'ಯಾವುದೇ ಬಗೆಯಲ್ಲಿ ನೈತಿಕವಾಗಿ ರಜಾದಿನವೆಂಬುದಿಲ್ಲ.' ನಿನ್ನ ಒಂದು ಕ್ಷಣದ ತಪ್ಪಿನಿಂದಾಗಿ ೩೦ ವರ್ಷಗಳ ತಪಸ್ಸು ನಷ್ಟವಾಗಬಹುದು!'' ಮಹಾರಾಜರ ಈ ಮಾತುಗಳನ್ನು ಕೇಳಿ ನಾನು ಹೆದರಿಹೋದೆ. ನಾನು ಆಗ ತಾನೇ (೧೯೬೦ರಲ್ಲಿ) ಆಶ್ರಮ ಸೇರಿದ್ದೆ. ಸುರೇಶ ಮಹಾರಾಜರು ಕಠೋರವಾಗಿ ಕಂಡರೂ ಅವರ ಹೃದಯ ಬಲು ಕೋಮಲ. ಅವರು ಸಾಧು-ಬ್ರಹ್ಮಚಾರಿಗಳನ್ನು ತುಂಬಾ ಪ್ರೀತಿಸುತ್ತಿದ್ದು ಯಾವುದೇ ಮಠಾಧ್ಯಕ್ಷರು ಅವರ ವಿರುದ್ಧವಾಗಿ ಏನಾದರೂ ಹೇಳಿದರೆ, ಅವರು ತಮ್ಮನ್ನು ತಿದ್ದಿಕೊಳ್ಳಲು ಬಳಸುತ್ತಿದ್ದರು.

ಮಹಾರಾಜರು ಪ್ರತಿದಿನವೂ ಸಾಯಂಕಾಲ ಶ್ರೀರಾಮಕೃಷ್ಣರ ಮಂದಿರದ ಪೂರ್ವದಿಕ್ಕಿನಲ್ಲಿರುವ ಮೈದಾನದಲ್ಲಿ ನಡೆದಾಡುತ್ತ ಯುವ ಸಾಧುಗಳಿಗೆ ಸಾಧುಜೀವನದ ಬಗ್ಗೆ ಹೇಳುತ್ತಿದ್ದರು.

### ಜೂನ್ ೧೯೬೦

ಮಹಾರಾಜರೊಡನೆ ತಿರುಗಾಡುತ್ತ ನಾನು ಕೇಳಿದೆ, ''ಹೊರಗಿನ ಜನರೊಡನೆ ನಾವು ಹೇಗೆ ವ್ಯವಹರಿಸಬೇಕು?'' ಸುರೇಶ ಮಹಾರಾಜರು ಹೇಳಿದರು: ''ಎಷ್ಟು ಬೇಕೋ ಅಷ್ಟೆ. ಚಿಕ್ಕ ಸಸಿಯನ್ನು ಬೇಲಿಯಿಂದ ರಕ್ಷಿಸಬೇಕು. ನಂತರ ಅದಕ್ಕೆ ಹಸುವನ್ನು ಕಟ್ಟಿದರೂ ಪರವಾಗಿಲ್ಲ. ನಿನ್ನನ್ನು ಒಂದು ಆಸ್ಪತ್ರೆಗೆ ಕೆಲಸ ಮಾಡಲು ಕಳುಹಿಸಲಾಗಿದೆ ಎಂದಿಟ್ಟುಕೊ. ನೀನು ಅಲ್ಲಿನ ತುರ್ತು ವಾರ್ಡ್‌ನಲ್ಲಿ ಡ್ರೆಸಿಂಗ್ ಕೆಲಸ ಮಾಡಬೇಕಾಗಿದೆ. ಹುಡುಗಿಯೊಬ್ಬಳ ಕಾಲನ್ನು ಪ್ರತಿದಿನವೂ ಸ್ವಚ್ಛಗೊಳಿಸಿ, ಪರಿಷ್ಕರಿಸಿ ಬ್ಯಾಂಡೇಜ್ ಮಾಡುತ್ತಿರುವೆ ಎಂದಿಟ್ಟುಕೋ. ನಿನ್ನ ಕೆಲಸ ನೀನು ಮಾಡುತ್ತಿರುವೆ — ಹೀಗಿರುವಾಗ ರಾತ್ರಿ ಅವಳಿಗೆ ಪ್ರೇಮಪತ್ರ ಬರೆಯುವೆಯೇನು?'' ಮಹಾರಾಜರ ಮಾತುಗಳನ್ನು ಕೇಳಿ ನಾನು ಸ್ತಬ್ಧನಾದೆ. ನಂತರ ಮುಂದುವರೆಸಿದರು, ''ನೋಡು ಸಾಧು ಜೀವನವೆಂಬುದು ಆದರ್ಶ ಜೀವನ. ಆದರ್ಶದಿಂದ ಕದಲಬಾರದು. ಬೇಕಾದ್ದಕ್ಕಿಂತ ಹೆಚ್ಚಿನದಾಗಿ ಏನನ್ನೂ ಮಾಡಲು ಹೋಗಬೇಡ. ನಿನ್ನನ್ನು ನೀನು ಸದಾ ರಕ್ಷಿಸಿಕೊ.''



ಮತ್ತೊಂದು ದಿನ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ತರಬೇತಿ ಕೇಂದ್ರದ ಬಗ್ಗೆ ಹೇಳಿದರು : ''ನೋಡು, ಕೆಲಸ ಮಾಡುವ ಸಾಧುಗಳ ಅಭಾವದಿಂದಾಗಿ ಅನೇಕ ಮಠಾಧ್ಯಕ್ಷರುಗಳು ಬೇಲೂರು ಮಠದ ತರಬೇತಿ ಕೇಂದ್ರವನ್ನು ವಿರೋಧಿಸಿದ್ದರು. ಎರಡು ವರ್ಷ ಹುಡುಗರನ್ನು ಕೆಲಸದಿಂದ ಬಿಡುಗಡೆ ಮಾಡಿ, ತರಬೇತಿ ಕೇಂದ್ರದಲ್ಲಿ ಅವರಿಗೆ ಕೇವಲ ಶಾಸ್ತ್ರಾಧ್ಯಯನ, ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ಅಧ್ಯಯನ ಹಾಗೂ ಜಪಧ್ಯಾನಗಳನ್ನು ಮಾಡುವ ಸದಾವಕಾಶವನ್ನು ನಾವು ಒದಗಿಸಬೇಕೆಂದು ತೀರ್ಮಾನಿಸಿದೆವು. ನಿಮಗೇ ಏನೂ ತಿಳಿದಿರದಿದ್ದರೆ ಇತರರಿಗೆ ನೀವೇನು ಹೇಳುವಿರಿ? ಶ್ರೀಮಂತರು ತಮ್ಮ ಮಕ್ಕಳನ್ನು ರಾಮಕೃಷ್ಣ ಮಿಷನ್ನಿನ ಶಾಲಾ-ಕಾಲೇಜುಗಳಿಗೆ ವಿದ್ಯೆಯನ್ನು ಕಲಿಯಲೆಂದು ಕಳುಹಿಸುತ್ತಾರೆ ಎಂಬುದು ನಿನಗೆ ಗೊತ್ತೇ ಇದೆ. ಇಲ್ಲಿನ ಶಿಕ್ಷಣ ದೊರೆತರೆ ಮಕ್ಕಳು ತಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳುವ ಯೋಗ್ಯತೆಯನ್ನು ಪಡೆಯುತ್ತಾರೆ ಎಂದು ಅವರ ನಂಬಿಕೆ. ಅದೇ ರೀತಿ ನಾವೇನಾದರೂ ನಿಮಗೆ ಚೆನ್ನಾಗಿ ಠಾಕೂರರ ಆದರ್ಶದ ಶಿಕ್ಷಣವನ್ನು ನೀಡದಿದ್ದರೆ ನೀವು ಠಾಕೂರರ ಆಧ್ಯಾತ್ಮಿಕ ಸಂಪತ್ತನ್ನು ಕಾಪಾಡಿಕೊಳ್ಳಲಾರಿರಿ.''

ಅನಂತರ ಅವರು ಜಗತ್ತಿನಲ್ಲಿ ಶ್ರೀರಾಮಕೃಷ್ಣ-ಸ್ವಾಮೀಜಿಯವರ ಭಾವಧಾರೆಯನ್ನು ಹೇಗೆ ಪ್ರಚಾರ ಮಾಡಬೇಕೆಂಬುದರ ಬಗ್ಗೆ ಹೇಳಿದರು: ''ನೋಡು, ನಿನ್ನ ಪೆಟ್ಟಿಗೆಯಲ್ಲಿ ವಜ್ರ, ಮಣಿ-ಮಾಣಿಕ್ಯ , ಚಿನ್ನ ಹಾಗೂ ಹಣ ಇವೆಯೆಂದು ಯಾರಿಗೂ ತಿಳಿಯದಿದ್ದರೆ ಅವುಗಳಿಗೇನು ಬೆಲೆ?''

''ಠಾಕೂರರ ಅಮರ ಹಾಗೂ ಅಮೂಲ್ಯ ಉಪದೇಶಗಳನ್ನು ಜಗತ್ತಿನ ಕಲ್ಯಾಣಕ್ಕಾಗಿ ಎಲ್ಲೆಡೆಯೂ ಬಿತ್ತರಿಸಬೇಕು.

''ಒಂದು ಘಟನೆಯನ್ನು ಕೇಳು. ಸ್ವಿಟ್ಜರ್ಲ್ಯಾಂಡ್‌ನ ವ್ಯಕ್ತಿಯೊಬ್ಬ ಗಡಿಯಾರಗಳನ್ನು ಮಾರಾಟ ಮಾಡಲು ಹೊರಟ. ಆಗ ಜನರು ಗಡಿಯಾರದ ಉಪಯುಕ್ತತೆಯನ್ನು ತಿಳಿದಿರಲಿಲ್ಲ. ಆ ವ್ಯಕ್ತಿಯು ಏಷ್ಯಾದ ವಿಭಿನ್ನ ದೇಶಗಳಲ್ಲಿ ಗಡಿಯಾರಗಳನ್ನು ಮಾರಾಟ ಮಾಡುತ್ತ, 'ನೀವಿದನ್ನು ಉಪಯೋಗಿಸಿ ಸಮಯದ ಬೆಲೆಯನ್ನು ತಿಳಿಯಿರಿ. ನಿಮಗೆ ಇದು ಇಷ್ಟವಾಗದಿದ್ದರೆ ನಾನು ಹಿಂದಿರುಗುವಾಗ ಗಡಿಯಾರಗಳನ್ನು ಹಿಂದಕ್ಕೆ ತೆಗೆದುಕೊಳ್ಳುವೆ. ನೀವು ಹಣವನ್ನೇನೂ ಕೊಡಬೇಕಾಗಿಲ್ಲ.' ಒಂದು ವರ್ಷ ಕಳೆದ ಬಳಿಕ ವ್ಯಾಪಾರಿಯು ಹಿಂದಿರುಗಿದಾಗ ಗಡಿಯಾರದ ಬೆಲೆಯನ್ನು ಅವರು ತಿಳಿದುಕೊಂಡಿದ್ದರು. ಅದೇ ರೀತಿ ಶ್ರೀರಾಮಕೃಷ್ಣ-ಸ್ವಾಮೀಜಿಯವರ ಉಪದೇಶಗಳನ್ನು ನಾವು ಪ್ರಪಂಚದಾದ್ಯಂತ ಪ್ರಚಾರಮಾಡಬೇಕು. ಕೆಲವರು ಅವುಗಳನ್ನು ಒಪ್ಪುವರು, ಮತ್ತೆ ಕೆಲವರು ಒಪ್ಪದೆಯೂ ಇರಬಹುದು. ಠಾಕೂರರ ಭಾವ ಹಾಗೂ ಉಪದೇಶಗಳು ಸಮಗ್ರ ಮಾನವಜಾತಿಗೆ ಖಂಡಿತವಾಗಿಯೂ ಮಂಗಳವನ್ನುಂಟುಮಾಡುವುವು. ಠಾಕೂರರ ಭಾವದಿಂದ ಕೂಡಿದ ನಮ್ಮ ಆದರ್ಶ ಹಾಗೂ ಪವಿತ್ರ ಜೀವನವನ್ನು ಕಂಡಾಗ ಮಾತ್ರವೇ ಜನರು ಸ್ಫೂರ್ತಿಯನ್ನು ಪಡೆದು, ಅವರ ಭಾವವನ್ನು ತಾವೂ ಗ್ರಹಿಸುವರು.''

ಮೂರು-ನಾಲ್ಕು ವರ್ಷಗಳು ಸುರೇಶ ಮಹಾರಾಜರೊಡನೆ ಇರುವ ಸದಾವಕಾಶ ನನಗೆ ದೊರಕಿತ್ತು. ಅವರು ಕಠೋರ ವೇದಾಂತಿಯಾಗಿದ್ದರು. ಗೌಡಪಾದರ 'ಅಜಾತವಾದ' ಅವರಿಗೆ ಅತಿ ಪ್ರಿಯವಾಗಿತ್ತು. ಅವರೆಂದೂ ಠಾಕೂರರ ಮಂದಿರದಲ್ಲಿ ಪ್ರಣಾಮ ಮಾಡುವುದನ್ನು ನಾನು ನೋಡಿಲ್ಲ. ಇಂತಹ ಸಾಧುಗಳನ್ನು ಗುರುತಿಸುವುದು ಕಷ್ಟ. ಇಂಥವರೆಲ್ಲ ತಮ್ಮ ಭಕ್ತಿಯನ್ನು ತೋರಿಸಿಕೊಳ್ಳುವುದಿಲ್ಲ.

ಒಂದು ದಿನ ಅವರು ನನಗೆಂದರು: ''ನೋಡು, ಆತ್ಮವು ಮುಕ್ತವಾಗುವುದೆಂಬುದು ಸರಿಯಲ್ಲ. ಆತ್ಮಕ್ಕೆ ಬಂಧನವೂ ಇಲ್ಲ, ಮುಕ್ತಿಯೂ ಇಲ್ಲ. ಆತ್ಮವು ಏನೆಂಬುದನ್ನು ಹೇಳಲಾಗುವುದಿಲ್ಲ. ಈ ಭೂಮಿಯಲ್ಲಿರುವವರಿಗೆ ಮಾತ್ರವೇ ಹಗಲು-ರಾತ್ರಿ, ಸುಖ-ದುಃಖ ಮುಂತಾದ ದ್ವಂದ್ವಾತ್ಮಕ ಪ್ರಶ್ನೆಗಳು ಅನ್ವಯಿಸುವುದು. ಯಾರು ಸೂರ್ಯನಲ್ಲಿ ವಾಸಿಸುತ್ತಾರೋ ಅವರು ಅನಾದಿಕಾಲದಿಂದಲೂ ಜ್ಯೋತಿರ್ಮಂಡಲದಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ. ಅವರಿಗೆಲ್ಲ ಅದೇ ಏಕಾತ್ಮಕವಾದ, 'ಜ್ಯೋತಿಃ' ಏಕರಸವಾಗಿರುವ ಜ್ಯೋತಿಯ ಬೋಧವಿರುವುದಿಲ್ಲ. ಏಕೆಂದರೆ ಅವರಿಗೆ 'ಅಂಧಕಾರ'ದ ಯಾವುದೇ ಕಲ್ಪನೆ ಇರುವುದಿಲ್ಲ.''

೧೯೬೩ರ ಮೇ-ಜೂನ್‌ನಲ್ಲಿ ಮಹಾರಾಜರಿಗೆ ಹೃದಯದ ತೊಂದರೆ ಕಾಣಿಸಿಕೊಂಡಿತು. ಅವರು ಕಲ್ಕತ್ತದ ಪಿ.ಜಿ. ಆಸ್ಪತ್ರೆಗೆ (ಇಂದಿನ ಸೇಠ್ ಸುಖಲಾಲ್ ಕಾರಣಾನಿ ಆಸ್ಪತ್ರೆ) ಸೇರಿದರು. ಅವರನ್ನು ನೋಡಲೆಂದು ಅದ್ವೈತ ಆಶ್ರಮದಿಂದ ನಾನು ಆಗಾಗ ಹೋಗುತ್ತಿದ್ದೆ. ''ನೋಡು, ನನ್ನ ಪಕ್ಕೆಲುಬಿನ ಗೂಡು ಹಿಡಿದಿಡಲಾಗದಷ್ಟು ನನ್ನ ಹೃದಯ ದೊಡ್ಡದಾಗಿದೆ,'' ಎಂದು ಒಂದು ದಿನ ಅವರು ತಮಾಷೆ ಮಾಡಿದರು.

ಅವರು ಟೇಬಲ್‌ನ ಮೇಲೆ, ಶಿಲ್ಪಿ ಎನ್.ಸಿ.ದಾಸ್ ಅವರು ತಯಾರಿಸಿದ ಠಾಕೂರರ ಹಾಗೂ ಶ್ರೀಮಾತೆಯವರ ಚಿತ್ರವಿತ್ತು. ಪ್ರತಿದಿನ ಸಾಯಂಕಾಲ ಕೆಲವು ಭಕ್ತ ನರ್ಸ್‌ಗಳು 'ಖಂಡನ ಭವಬಂಧನ' ವನ್ನು ಹಾಡುತ್ತಿದ್ದರೆ ಮಹಾರಾಜರು ಕಣ್ಮುಚ್ಚಿ ಅದನ್ನು ಆಲಿಸುತ್ತಿದ್ದರು. ಆ ಕಡು ವೇದಾಂತಿಯ ಹೃದಯದಲ್ಲಿ ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರು! ಎಂದು ವಿಸ್ಮಿತನಾಗುತ್ತಿದ್ದೆ. ನಂತರ ಒಂದು ದಿನ ಅವರು ನನ್ನನ್ನು ಕೇಳಿದರು, ''ಸ್ವಾಮೀಜಿಯವರ ಫೋಟೋ ತಂದುಕೊಡುವೆಯಾ?'' ನಾನು ಆಸ್ಪತ್ರೆಯಿಂದ ನೇರವಾಗಿ ಚೌಬಜಾರಿನ ಎನ್.ಸಿ.ದಾಸ್ ಅವರ ಮನೆಗೆ ಹೋದೆ. ಅವರು ಮಹಾಪುರುಷ ಮಹಾರಾಜರ ಶಿಷ್ಯರು. ಸುರೇಶ ಮಹಾರಾಜರು ಸ್ವಾಮೀಜಿಯವರ ಫೋಟೋ ಕೇಳಿದ್ದಾರೆ ಎಂದಾಗ ಅವರಿಗೆ ಅದೆಷ್ಟು ಸಂತೋಷ! ''ನಾಳೆಯೇ ನಾನೊಂದು ಸ್ವಾಮೀಜಿಯವರ ಚಿತ್ರವನ್ನು ಕಟ್ಟುಹಾಕಿಸಿ ಮಹಾರಾಜರಿಗೆ ತಲುಪಿಸುತ್ತೇನೆ'' ಎಂದು ನನಗೆ ಆಶ್ವಾಸನೆ ನೀಡಿದರು.

ಸುರೇಶ ಮಹಾರಾಜರು ಸ್ವಾಮಿ ಅಖಿಲಾನಂದ ಹಾಗೂ ಇತರ ಸಾಧುಗಳಿಗೆ ಬರೆದಿದ್ದ ಕೆಲವು ಪತ್ರಗಳು ನನ್ನಲ್ಲಿವೆ. ದಕ್ಷಿಣೇಶ್ವರದಲ್ಲಿರುವ ಶಾರದಾ ಮಠದ ಜಮೀನನ್ನು ಖರೀದಿಸಲು ಅವರು ಅಮೆರಿಕಾದ ಸಾಧುಗಳಿಂದ ಆರ್ಥಿಕ ಸಹಾಯವನ್ನು ಕೋರಿದ್ದರು. ಮಹಿಳೆಯರಿಗಾಗಿ ಮಠವನ್ನು ಸ್ಥಾಪಿಸುವುದು ಸ್ವಾಮೀಜಿಯವರ ಇಚ್ಛೆಯಾಗಿತ್ತು. ಈ ಇಚ್ಛೆಯನ್ನು ಪೂರೈಸಲು ಸುರೇಶ ಮಹಾರಾಜರು ಬಹಳ ಶ್ರಮಿಸಿದ್ದರು. ಈ ಪತ್ರಗಳು ಐತಿಹಾಸಿಕವಾಗಿ ಅಮೂಲ್ಯವಾದವುಗಳು.

೧೯೬೩ನೆ ಇಸವಿ. ಜಗದಾದ್ಯಂತ ಸ್ವಾಮೀಜಿಯವರ ಶತಾಬ್ದಿಯನ್ನು ಆಚರಿಸಲಾಗುತ್ತಿತ್ತು. ಆಸ್ಪತೆಯಲ್ಲಿದ್ದ ಸುರೇಶ ಮಹಾರಾಜರು ನನಗೊಂದು ದಿನ ಹೇಳಿದರು, ''ನೋಡು ಡಾಕ್ಟರರು ನನ್ನ ಹೃದಯ ದೊಡ್ಡದಾಗಿದೆ ಎಂದು ಹೇಳುತ್ತಾರೆ.'' ಇದೇ ಸಾಧುವಿನ ಲಕ್ಷಣ. ವಿಶಾಲ ಹೃದಯದ ಸಾಧುಗಳಾದ ಸ್ವಾಮಿ ಶಾಶ್ವತಾನಂದರು ೨೭.೮.೧೯೬೩ರಂದು ದೇಹತ್ಯಾಗ ಮಾಡಿದರು. ಅಪೂರ್ವ ಸಾಧುಗಳು ಅವರು! ❖